ಐ.ಸಿ.ಎ.ಆರ್. – ಕೆ. ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

ರೈತರಿಗಾಗಿ ಹಾಗೂ ಕೃಷಿ ವಿಸ್ತರಣೆ ಸಿಬ್ಬಂದಿಗಾಗಿ

# ಕೃಷಿ ವಿಜ್ಞಾನ ಪತ್ರಿಕೆ

ಸಂಪುಟ–9 | ಎಪ್ರಿಲ್–ಜೂನ್, 2019 | ತ್ರೈಮಾಸಿಕ ಪತ್ರಿಕೆ | ಸಂಚಿಕೆ–2

## ಸಂಪಾದಕರ ನುಡಿ

ವರುಣನ ಕೃಪೆಯಿಂದ ಉತ್ತಮ ಮುಂಗಾರು ಹಂಗಾಮನ್ನು ಅಪೇಕ್ಷಿಸುತ್ತ ರೈತರು ತಮ್ಮ ತಮ್ಮ ಹೊಲಗಳಲ್ಲಿ ಮಾಗಿ ಉಳುಮೆ ಹಾಗೂ ಮಣ್ಣು ಮತ್ತು ನೀರು ಸಂರಕ್ಷಣೆಯ ಸೂಕ್ತ ಕ್ರಮಗಳನ್ನು ಅಳವಡಿಸಿಕೊಳ್ಳಬೇಕೆಂದು ಕೋರುತ್ತೇವೆ. ಮುಂಗಾರು ಹಂಗಾಮು ಪ್ರಾರಂಭದ ಮೊದಲು ಬಿದ್ದ ಮಳೆ ನೀರನ್ನು ಮಣ್ಣಿನಲ್ಲಿ ಇಂಗಿಸುವತ್ತ ರೈತರು ಹೆಚ್ಚು ಗಮನ ಹರಿಸಬೇಕು. ಮಳೆ ನೀರು ಇಂಗಿ ಹೆಚ್ಚಾದ ನೀರು ಹೊಲದಿಂದ ಹೊರಗೆ ಹೋಗದಂತೆ ಚೌಕುಮಡಿಗಳನ್ನು ಹಾಗೂ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಬೇಕು. ಜೊತೆಗೆ ಬಿತ್ತನೆಗೆ ಬೇಕಾದಂತಹ ಗುಣಮಟ್ಟದ ಬೀಜ ಖರೀದಿಸುವುದರ ಜೊತೆಗೆ ಬೀಜ ಮೊಳಕೆ ಪರೀಕ್ಷೆ ಮಾಡುವುದು ಬಹಳ ಮುಖ್ಯವಾದುದು. ಈ ಸಂಚಿಕೆಯಲ್ಲಿ ಮುಂಗಾರು ಹಂಗಾಮಿನ ವಿವಿಧ ಬೆಳೆಗಳ ತಾಂತ್ರಿಕತೆಗಳು, ತಳಗಳು, ರೋಗ–ವ–ಕೀಟಗಳ ಹತೋಟಿ ಕ್ರಮಗಳು ಹಾಗೂ ಕೇಂದ್ರದಲ್ಲಿ ಲಭ್ಯವಿರುವ ಬೀಜಗಳ ಮಾಹಿತಿಯನ್ನು ಕೊಡಲಾಗಿದೆ. ಒಣ ಬೇಸಾಯದ ಹೊಲಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಈಗ ಸೂಕ್ತವಾದ ಸಮಯವಾಗಿದ್ದು, ಆಸಕ್ತ ರೈತರು ಸಂಬಂಧಪಟ್ಟ ಇಲಾಖೆಗಳನ್ನು ಹಾಗೂ ನಮ್ಮ ಕೇಂದ್ರದ ವಿಜ್ಞಾನಿಗಳನ್ನು ಸಂಪರ್ಕಿಸಬೇಕೆಂದು ಕೋರುತ್ತೇವೆ.

## ಮಾಗಿ ಉಳುಮೆಯಿಂದಾಗುವ ಪ್ರಯೋಜನಗಳು

ಹಿಂಗಾರು ಬೆಳೆ ಕಟಾವು ಮಾಡಿದ ಒಂದು ವಾರದಲ್ಲಿ ಮಾಗಿ ಉಳುಮೆ ಮಾಡುವದರಿಂದ ಮಣ್ಣಿಗೆ ಹಾಗೂ ಮುಂದಿನ ಬೆಳೆಗಳಿಗೆ ಆಗುವ ಪ್ರಯೋಜನಗಳು ಈ ಕೆಳಗಿನಂತಿವೆ.

1) ಭೂಮಿಯ ಮೇಲ್ಪದರಿನಲ್ಲಿರುವ ಸಾವಯವ ವಸ್ತುಗಳು ಅಥವಾ ಗಿಡಗಳ ಪಳೆಯುಳಿಕೆಗಳು ಮಣ್ಣಿಗೆ ಚೆನ್ನಾಗಿ ಸೇರುವವು.
2) ಬಿಸಿಲಿನ ತೀವ್ರತೆಯಿಂದ ಬೆಳೆಯ ಪಳಯುಳಿಕೆಗಳಲ್ಲಿರುವ ರೋಗದ ಶಿಲೀಂದ್ರಗಳು ಮತ್ತು ಇತರೆ ರೋಗಾಣುಗಳು ನಾಶವಾಗುವವು.
3) ಮಣ್ಣು ಮತ್ತು ನೀರು ಸಂರಕ್ಷಣೆ ಮಾಡಬಹುದು.
4) ಭೂಮಿಯ ಒಳಗಡೆ ಮತ್ತು ಬೆಳೆಯ ಪಳಯುಳಿಕೆಗಳಲ್ಲಿ ಇರುವ ಕೀಟಗಳ ಕೋಶಗಳು, ತತ್ತಿಗಳು ಮತ್ತು ಪ್ರೌಢ ಕೀಟಗಳನ್ನು ನಾಶಪಡಿಸಬಹುದು
5) ಭೂಮಿಯ ಆಳದಲ್ಲಿರುವ ರೋಗ ತರುವ ಶಿಲೀಂದ್ರಗಳು, ದುಂಡಾಣುಗಳು, ನೆಮ್ಯಾಟೋಡ್ ಮತ್ತು ಇತರೆ ಹಾನಿಕಾರಕ ಜೀವಿಗಳನ್ನು ನಾಶಪಡಿಸಬಹುದು
6) ಮಣ್ಣಿನಲ್ಲಿ ಗಾಳಿಯಾಡುವ ಕ್ರಿಯೆ ಹೆಚ್ಚಿಸುವದು.
7) ಮಣ್ಣಿನಲ್ಲಿ ನೀರು ಹಿಡಿದಿಟ್ಟುಕೊಳ್ಳುವ ಹಾಗೂ ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚಿಸುವದು.
8) ಮಣ್ಣಿನ ಕಣಗಳು ಹಾಗೂ ಸಾವಯವ ವಸ್ತುಗಳು ರಭಸವಾಗಿ ನೀರಿನೊಂದಿಗೆ ಹರಿದು ಹೋಗುವದನ್ನು ತಡೆಯಬಹುದು.
9) ಮಣ್ಣಿನ ಮೇಲ್ಪದರಿನಲ್ಲಿರುವ ಕಳೆ ಬೀಜಗಳು ಆಳವಾಗಿ ಹೋಗುವಂತೆ ಮಾಡುವದರಿಂದ ಕಳೆನಿಯಂತ್ರಣ ಮಾಡುವದು.
10) ವಿವಿಧ ಪೋಷಕಾಂಶಗಳು ಮಣ್ಣಿನ ಮೇಲ್ಪದರಿನಲ್ಲಿ ಶೇಖರಣೆಗೊಳ್ಳುತ್ತವೆ.
11) ಮಣ್ಣಿನ ಭೌತಿಕ, ಜೈವಿಕ ಹಾಗೂ ರಾಸಾಯನಿಕ ಕ್ರಿಯೆ ಉತ್ತಮಗೊಳ್ಳುತ್ತವೆ.

12) ಆಳವಾಗಿ ಉಳುಮೆ ಮಾಡುವದರಿಂದ ಇಲಿಗಳ ನಿಯಂತ್ರಣ ಮಾಡಬಹುದು.

13) ಆಳವಾದ ಉಳುಮೆ ಮಾಡುವದರಿಂದ ಮುಂದಿನ ಬೆಳೆಗೆ ಭೂಮಿ ತಯಾರಿಕೆ ಮತ್ತು ಮಣ್ಣನ್ನು ಹದಗೊಳಸಲು ಅನುಕೂಲವಾಗುವದು.

14) ಸಾವಯವ ವಸ್ತುಗಳು ಅಥವಾ ಗಿಡಗಳ ಪಳಯುಳಕೆಗಳು ಮಣ್ಣಿಗೆ ಸೇರುವದರಿಂದ ಮೊದಲ ಮಳೆ ಬಿದ್ದ ತಕ್ಷಣ ಕಳೆಯಲು ಪ್ರಾರಂಭಿಸುವದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುವುದು. ಇದರಿಂದ ಉತ್ತಮ ಬೆಳೆ ಪಡೆಯಲು ಅನುಕೂಲವಾಗುವದು.

## ಮಣ್ಣಿನ ತೇವಾಂಶ ಹೆಚ್ಚಿಸಲು ಚೌಕು ಮಡಿಗಳ ನಿರ್ಮಾಣ

ಮಧ್ಯಮದಿಂದ ಆಳವಾದ ಕಪ್ಪು ಮಣ್ಣಿನಲ್ಲಿ ಜಮೀನಿನ ಇಳಿಜಾರು ನೋಡಿಕೊಂಡು ಚೌಕುಮಡಿಗಳನ್ನು ಬಂಡ್‌ಫಾರ್ಮರ್ ಸಾಧನದಿಂದ ಭೂಮಿಯ ಸಾಗುವಳಿ ಮಾಡಿ ಬಿತ್ತುವ ಪೂರ್ವದಲ್ಲಿ ಅಂದರೆ ಮುಂಗಾರು ಮಳೆ



ಬೀಳುವ ಪೂರ್ವದಲ್ಲಿ ಮಾಡಬೇಕು. ಸಾಮಾನ್ಯವಾಗಿ ಚೌಕು ಮಡಿಗಳ ಉದ್ದ 15 ಫೂಟು ಹಾಗೂ ಅಗಲ 15 ಫೂಟು ಇರುವಂತೆ ಮಾಡಬೇಕು. ಹೀಗೆ ತಯಾರಿಸಿದ ಚೌಕು ಮಡಿಗಳನ್ನು ಮುಂಗಾರು ಬೆಳೆಗಳ ಬಿತ್ತನೆಯ ಪೂರ್ವದಲ್ಲಿ ಹರಗಿ ಬಿತ್ತನೆ ಮಾಡಬೇಕು. ಚೌಕು ಮಡಿಗಳಲ್ಲಿ ಬಿದ್ದ ಮಳೆ ನೀರು ಹೊರಗೆ ಹರಿದು ಹೋಗದೆ ಮಡಿಗಳಲ್ಲಿ ಹೆಚ್ಚು ಸಮಯ ಉಳಿಯುವದರಿಂದ ಜಮೀನಿನಲ್ಲಿ ನೀರು ಇಂಗುವ ಪ್ರಮಾಣ ಹೆಚ್ಚಾಗಿ ಮಣ್ಣಿನಲ್ಲಿ ನೀರಿನ ಸಂಗ್ರಹ ಹೆಚ್ಚಿಸುತ್ತದೆ. ಈ ಪದ್ಧತಿಯು ಕಡಿಮೆ ಮಳೆಯ ಕಾಲದಲ್ಲಿ ತುಂಬ ಉಪಯೋಗವಾಗುತ್ತದೆ. ಹೀಗೆ ಚೌಕು ಮಡಿ ಮಾಡಿ ಬಿತ್ತುವದರಿಂದ ಶೇಕಡಾ 15 ರಿಂದ 20 ರಷ್ಟು ಹೆಚ್ಚು ಇಳುವರಿ ಪಡೆಯಬಹುದು.

### ಮಣ್ಣು ಮತ್ತು ನೀರು ಪರೀಕ್ಷೆ ಮಾಡುವ ಸೌಲಭ್ಯ

**ಬೇಸಿಗೆ ಹಂಗಾಮಿನಲ್ಲಿ ಜಮೀನಿನ ಮಣ್ಣು ಪರೀಕ್ಷೆ ಮಾಡಿಸುವುದರ ಮುಖಾಂತರ ಮಣ್ಣಿನ ಫಲವತ್ತತೆಯನ್ನು ತಿಳಿದುಕೊಳ್ಳುವದರಿಂದ ಬೆಳೆಗಳಿಗೆ ಬೇಕಾದ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಒದಗಿಸಲು ಅನುಕೂಲವಾಗುತ್ತದೆ. ಅದಕ್ಕಾಗಿ ಮಣ್ಣು ಪರೀಕ್ಷೆ ಮಾಡಿಸುವುದು ಅವಶ್ಯಕ. ನಮ್ಮ ಕೇಂದ್ರದಲ್ಲಿ ಮಣ್ಣು ಮತ್ತು ನೀರು ಪರೀಕ್ಷೆ ಮಾಡುವ ಸೌಲಭ್ಯವಿದೆ. ರೈತಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿ.**

**ಮಾಹಿತಿಗಾಗಿ ಸಂಪರ್ಕಿಸಿರಿ : ಶ್ರೀ ಎನ್.ಎಚ್. ಭಂಡಿ, ವಿಷಯ ತಜ್ಞರು, ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಮೊಬೈಲ್: 09482554328**

## ಹೆಸರು ಬೆಳೆಯ ಬೇಸಾಯ ಕ್ರಮಗಳು

ಮುಂಗಾರು ಹಂಗಾಮಿನಲ್ಲಿ ಗದಗ ಜಿಲ್ಲೆಯಲ್ಲಿ ಪ್ರಮುಖವಾಗಿ ಬಿತ್ತನೆ ಮಾಡುವ ಬೆಳೆ ಎಂದರೆ ಹೆಸರು. ಮುಂಗಾರಿನಲ್ಲಿ ಉತ್ತಮ ಮಳೆಯಾದರೆ ಕಡಿಮೆ ಅವಧಿಯಲ್ಲಿ ರೈತರಿಗೆ ಹೆಚ್ಚು ಲಾಭದಾಯಕವಾದಂತಹ ಬೆಳೆ ಹೆಸರು. ಹೆಸರು ಬೆಳೆಯಲ್ಲಿ ಅನೇಕ ತಳಿಗಳು ಇವೆ. ಗದಗ ಜಿಲ್ಲೆಗೆ ಸೂಕ್ತವಾದ ತಳಿಗಳ ಮಾಹಿತಿಯನ್ನು ಈ ಕೆಳಗೆ ಕೊಡಲಾಗಿದೆ.

| ತಳಿಗಳು | ವಿಶೇಷತೆಗಳು |
|---|---|
| ಸಿಲೆಕ್ಷನ್-4 | ಹೆಸರುಕಾಯಿ ಬಿಡಿಸುವಾಗ ಕಾಳು ಸಿಡಿಯುವುದಿಲ್ಲ. |
| ಶೈನಿಂಗ್ ಮೂಂಗ್ (ಮಿಂಚು ಹೆಸರು) | ಕಾಳು ಸಿಡಿಯುತ್ತದೆ. ಆದರೆ ಕಾಳು ದಪ್ಪವಿರುತ್ತದೆ. |
| ಡಿ.ಜಿ.ಜಿ.ವಿ-2 | ಎತ್ತರ ಬೆಳೆ, ಉದ್ದಕಾಯಿ ಹಾಗೂ ಕಾಳು ಸಿಡಿಯುವುದಿಲ್ಲ ಹಾಗೂ ಯಂತ್ರದಿಂದ ಕಟಾವು ಮಾಡಲು ಸೂಕ್ತವಾದ ತಳಿ. |
| ಬಿ.ಜಿ.ಎಸ್-9 | ಎತ್ತರ ಬೆಳೆ, ಕಾಯಿ ಸಿಡಿಯುವದಿಲ್ಲ ಹಾಗೂ ಯಂತ್ರದಿಂದ ಕಟಾವು ಮಾಡಲು ಸೂಕ್ತವಾದ ತಳಿ. |

**ಬೀಜದ ಪ್ರಮಾಣ ಹಾಗೂ ಬೀಜೋಪಚಾರ** : ಹೆಸರು ಬೀಜಗಳನ್ನು ಬಿತ್ತುವ ಪೂರ್ವದಲ್ಲಿ ಪ್ರತಿ ಎಕರೆಗೆ 100 ಗ್ರಾಂ ಕ್ಯಾಲ್ಸಿಯಂ ಕ್ಲೋರೈಡ್‌ನ್ನು 5 ಲೀಟರ್ ನೀರಿನಲ್ಲಿ ಕರಗಿಸಿ ನಂತರ ಈ ದ್ರಾವಣದಲ್ಲಿ 5 ಕಿಲೋ ಹೆಸರು ಬೀಜವನ್ನು 30 ನಿಮಿಷ ನೆನೆಸಬೇಕು. ನಂತರ 6-8 ಗಂಟೆಗಳವರೆಗೆ ನೆರಳಲ್ಲಿ ಒಣಗಿಸಬೇಕು. 200 ಗ್ರಾಂ ರೈಜೋಬಿಯಂ ಅಣುಜೀವಿ ಗೊಬ್ಬರವನ್ನು 5 ಕಿಲೋ ಬೀಜಕ್ಕೆ ಲೇಪಿಸಿ ಬಿತ್ತಬೇಕು. ಕ್ಯಾಲ್ಸಿಯಂ ಕ್ಲೋರೈಡ್

ದ್ರಾವಣದಲ್ಲಿ ಬೀಜವನ್ನು ನೆನೆಸಿ ಬಿತ್ತುವುದರಿಂದ ಹೆಸರು ಬೆಳೆಯಲ್ಲಿ ಬರ ನಿರೋಧಕತೆಯನ್ನು ಹೆಚ್ಚಿಸಬಹುದು. ಕಡಿಮೆ ಖರ್ಚಿನ ಬೀಜೋಪಚಾರದ ಈ ತಂತ್ರಜ್ಞಾನ ಹೆಸರು ಬೆಳೆಯಲ್ಲಿ ರೈತರಿಗೆ ಮುಖ್ಯವಾಗಿದೆ.

**ರಾಸಾಯನಿಕ ಗೊಬ್ಬರಗಳು:** ಬಿತ್ತುವಾಗ ಪ್ರತಿ ಎಕರೆಗೆ 25 ಕಿಲೋ ಡಿ.ಎ.ಪಿ ಗೊಬ್ಬರವನ್ನು ಹಾಕಬೇಕು. ಬೆಳೆಯು ಹೂವಾಡುವ ಹಾಗೂ ಕಾಳು ಕಟ್ಟುವ ಸಮಯದಲ್ಲಿ ಶೇಕಡಾ 2 ರ ಡಿ.ಎ.ಪಿ (20 ಗ್ರಾಂ ಡಿ.ಎ.ಪಿ ಪ್ರತಿ ಲೀಟರ್ ನೀರಿಗೆ ಕೂಡಿಸಿ) ಸಿಂಪರಣೆ ಮಾಡುವುದರಿಂದ ಹೆಸರು ಬೆಳೆಯ ಇಳುವರಿ ಹೆಚ್ಚುತ್ತದೆ.

**ಹೆಸರು ಬೆಳೆಯ ಪ್ರಮುಖ ಕೀಟಗಳು**

1. **ರಸಹೀರುವ ಕೀಟಗಳು (ಹೇನು ಹಾಗೂ ಥ್ರಿಪ್ಸ)** : ಈ ಕೀಟಗಳು ಚಿಗುರೆಲೆ ಮತ್ತು ಕಾಯಿಗಳಿಂದ ರಸ ಹೀರುತ್ತದೆ. ಇದರಿಂದ ಕಾಯಿಗಳು ಜೊಳ್ಳಾಗಿ ಬೆಳೆಯ ಇಳುವರಿ ಕಡಿಮೆಯಾಗುವದು. ಇವುಗಳನ್ನು ನಿಯಂತ್ರಿಸಲು ಡೈಮಿಥೋಯೇಟ 1.7 ಮಿ.ಲೀ ಅಥವಾ 0.3 ಮಿ.ಲೀ ಇಮಿಡಾಕ್ಲೊಪ್ರಿಡ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

2. **ಕಾಯಿ ಕೊರೆಯುವ ಕೀಟ** : ಈ ಹುಳುವು ಕಾಯಿಯ ಒಳಗೆ ಮೊಟ್ಟೆಯನ್ನಿಡುತ್ತದೆ. ಈ ಮೊಟ್ಟೆಗಳು ಮರಿಯಾದ ನಂತರ ಬೀಜವನ್ನು ತಿಂದು ಹಾಳು ಮಾಡುತ್ತವೆ. ಈ ಕೀಟಗಳನ್ನು ಹತೋಟಿ ಮಾಡಲು ಲ್ಯಾಮಡಾ ಸಿಲೋಥ್ರಿನ್ 1.0 ಮಿ.ಲೀ ಅಥವಾ ಪ್ರೊಫೇನೊಪಾಸ್ 2 ಮಿ.ಲೀ. ಔಷಧಿಯನ್ನು ಪ್ರತಿ ಲೀಟರ ನೀರಿಗೆ ಬೆರಸಿ ಸಿಂಪರಣೆ ಮಾಡಿರಿ.

3. **ಅಗ್ರೋಮೈಜಿಡ್ ನೊಣ** : ಈ ನೊಣವು ಹೆಸರು ಗಿಡಗಳ ಕಾಂಡ ಮತ್ತು ಕಾಯಿಗಳ ಎಳೆಯದಾದ ಭಾಗಗಳಲ್ಲಿ ಮೊಟ್ಟೆಯಿಡುತ್ತದೆ. ಮೊಟ್ಟೆಗಳು ಮರಿಯಾದ ನಂತರ ಕಾಂಡ ಕೊರೆಯುತ್ತವೆ. ಕೊರೆದ ಕಾಂಡ ಬಾಡುತ್ತದೆ. ಈ ಕೀಟದಿಂದ ಎಳೆಯ ಸಸಿಗಳು ಹೆಚ್ಚು ನಷ್ಟವಾಗುವವು. ಇವುಗಳನ್ನು ನಿಯಂತ್ರಿಸಲು ಮೇ ಕೊನೆಯ ವಾರ ಅಥವಾ ಜೂನ್ ಎರಡನೆಯ ವಾರದೊಳಗೆ ಬಿತ್ತನೆ ಮಾಡಬೇಕು. ಬಾಡುತ್ತಿರುವ ಸಸಿಗಳನ್ನು ಕಿತ್ತು ನೆಲದಲ್ಲಿ ಹೂಳಬೇಕು. ಇಮಿಡಾಕ್ಲೊಪ್ರಿಡ್ 0.3 ಮಿ.ಲೀ ಅಥವಾ ಡೈಯೊಮಿಥಾಕ್ಸಾಮ್ 0.3 ಗ್ರಾಂ ಅಥವಾ ಕಾರ್ಬಾಸಲ್ಫಾನ್ 2 ಮಿ.ಲಿ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

4. **ಎಲೆ ತಿನ್ನುವ ಹುಳು ಮತ್ತು ಕೊಂಬಿನ ಹುಳು** : ಈ ಹುಳುಗಳು ಎಲೆಗಳನ್ನು ತಿಂದು ಬೆಳೆ ಹಾನಿ ಮಾಡುತ್ತವೆ. ಕೀಟ ಬಾಧೆ ಅತೀಯಾದಾಗ ಎಲ್ಲಾ ಎಲೆಗಳನ್ನು ತಿಂದು ಬೆಳೆಯನ್ನು ಸಂಪೂರ್ಣವಾಗಿ ನಾಶಮಾಡುತ್ತದೆ. ಇವುಗಳನ್ನು ನಿಯಂತ್ರಿಸಲು ದೊಡ್ಡದಾದ ಕೀಟಗಳನ್ನು ಆರಿಸಿ ನಾಶಪಡಿಸಬೇಕು ಹಾಗೂ ಕೀಟಗಳು ಕಂಡ ತಕ್ಷಣ ಎಸಿಫೇಟ್ 1 ಗ್ರಾಂ ಅಥವಾ ಪ್ರೊಫೇನೊಫಾಸ್ 2 ಮಿ.ಲೀ. ಅಥವಾ ಇಮಾಮೆಕ್ಟಿನ್ ಬೆಂಜೊಯೇಟ 0.3 ಗ್ರಾಂ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ. ನೀರಿನ ಅನುಕೂಲತೆ ಇಲ್ಲದ ಕಡೆಗೆ 7 ರಿಂದ 8 ಕಿಲೋ ಫೆನವಲರೇಟ ಪುಡಿಯನ್ನು ಪ್ರತಿ ಎಕರೆಗೆ ಧೂಳೀಕರಿಸಬೇಕು.

**ರೋಗಗಳು :**

1. **ನಂಜು ರೋಗ** : ಎಲೆಗಳ ಮೇಲೆ ತಿಳಿ ಹಳದಿ ಬಣ್ಣದ ಕಲೆಗಳು ಕಾಣಿಸುತ್ತವೆ. ಇದರಿಂದ ಬೆಳೆ ಸಣ್ಣದಾಗುತ್ತದೆ. ಈ ರೋಗ ತೀವ್ರವಾಗಿದ್ದರೆ ಕಾಯಿ ಬಿಡುವದಿಲ್ಲ ಕಾಯಿ ಬಿಟ್ಟರೆ ಕಾಳುಗಳು ಸಣ್ಣದಾಗಿ, ಇಳುವರಿ ಕಡಿಮೆಯಾಗುವದು. ಆದ್ದರಿಂದ ರೋಗಕ್ಕೆ ತುತ್ತಾದ ಗಿಡಗಳನ್ನು ಪ್ರಾರಂಭದ ಹಂತದಲ್ಲಿ ಗುರುತಿಸಿ ಕಿತ್ತು ಮಣ್ಣಿನಲ್ಲಿ ಹೂಳಿರಿ. ನಂತರ ಡೈಮಿಥೊಯೇಟ 1.7 ಮಿ.ಲೀ. ಅಥವಾ ಇಮಿಡಾಕ್ಲೊಪ್ರಿಡ್ 0.3 ಮಿ.ಲೀ. ಔಷಧಿಯನ್ನು ಪ್ರತಿ ಲೀಟರ್‌ಗೆ ಕೂಡಿಸಿ ಸಿಂಪರಣೆ ಮಾಡಿ ರಸ ಹೀರುವ ಕೀಟಗಳನ್ನು ಹತೋಟಿ ಮಾಡಿ ರೋಗ ಉಲ್ಬಣಿಸುವುದನ್ನು ತಡೆಯಿರಿ.

2. **ಬೂದಿ ರೋಗ** : ಎಲೆಯ ಮೇಲೆ ಶಿಲೀಂಧ್ರದ ಬಿಳಿಯ ಪುಡಿಯಂಥ ಬೆಳವಣಿಗೆಯನ್ನು ಕಾಣಬಹುದು. ಇದರಿಂದ ಗಿಡಗಳು ಪೂರ್ತಿಯಾಗಿ ಒಣಗುತ್ತವೆ. ಇದರಿಂದ ಶೇ.10-60 ರಷ್ಟು ಇಳುವರಿ ನಷ್ಟವಾಗಬಹುದು. ಈ ರೋಗ ನಿಯಂತ್ರಿಸಲು ಪ್ರೊಪಿಕೋನೊಜೋಲ್ 1 ಮಿ.ಲಿ ಅಥವಾ ಕಾರ್ಬಂಡೈಜಿಮ್ 1 ಗ್ರಾಂ ಅಥವಾ ನೀರಿನಲ್ಲಿ ಕರಗುವ ಗಂಧಕ 3 ಗ್ರಾಂ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

**3. ಎಲೆ ಚುಕ್ಕೆರೋಗ** : ಎಲೆಗಳ ಮೇಲೆ ವೃತ್ತಾಕಾರದ ಕಂದು ಅಥವಾ ಕಪ್ಪು ಬಣ್ಣದ ಚುಕ್ಕೆಗಳನ್ನು ಕಾಣಬಹುದು. ಈ ರೋಗ ನಿಯಂತ್ರಿಸಲು ಮೆಂಕೋಜೆಬ್ 2 ಗ್ರಾಂ ಅಥವಾ ಕಾಪರ ಆಕ್ಸಿಕ್ಲೋರೈಡ್ ಅಥವಾ ಹೆಕ್ಸಾಕೋನಾಜೋಲ್ 1.5 ಮಿ.ಲೀ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪಡಿಸಿರಿ. ಬಿತ್ತುವ ಪೂರ್ವದಲ್ಲಿ ಪ್ರತಿ ಕಿಲೋ ಬೀಜಕ್ಕೆ ಟ್ರೈಕೊಡರ್ಮಾ 10ಗ್ರಾಂ ಜೈವಿಕ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತಿರಿ.

## ಶೇಂಗಾ ಬೆಳೆಯ ಬೇಸಾಯ ಕ್ರಮಗಳು

ಮುಂಗಾರು ಹಂಗಾಮಿನಲ್ಲಿ ಗದಗ ಜಿಲ್ಲೆಯಲ್ಲಿ ಒಣ ಬೇಸಾಯದಲ್ಲಿ ಬೆಳೆಯುವ ಪ್ರಮುಖವಾದ ಎಣ್ಣೆ ಬೆಳೆ ಎಂದರೆ ಶೇಂಗಾ. ಎಲ್ಲಾ ಬೆಳೆಗಳಗಿಂತ ಶೇಂಗಾ ಬೆಳೆಯು ರೈತರಿಗೆ ಅಧಿಕ ಲಾಭ ಕೊಡುವುದರ ಜೊತೆಗೆ ದನಕರುಗಳಿಗೆ ಆಹಾರವಾದ ಹೊಟ್ಟು ಲಭ್ಯವಾಗುವುದು. ಗದಗ ಜಿಲ್ಲೆಗೆ ಸೂಕ್ತವಾದ ತಳಿಗಳು ಈ ಕೆಳಗಿನಂತಿವೆ

| ತಳಿಗಳು | ವಿಶೇಷ ಗುಣಗಳು |
|---|---|
| ಜಿ.ಪಿ.ಬಿ.ಡಿ – 4 | ಎಲೆಚುಕ್ಕೆ ಹಾಗೂ ತುಕ್ಕುರೋಗ ನಿರೋಧಕ ಗುಣ ಹೊಂದಿದೆ |
| ಜಿ.ಪಿ.ಬಿ.ಡಿ – 5 | ದಪ್ಪ ಕಾಳಿನ ತಳಿ ಹಾಗೂ ಎಲೆ ಚುಕ್ಕೆ ರೋಗ ನಿರೋಧಕ ಶಕ್ತಿ ಹೊಂದಿದೆ |
| ಜಿ–2–52 | ಎಲೆಚುಕ್ಕೆ ಹಾಗೂ ತುಕ್ಕು ರೋಗ ನಿರೋಧಕ ಶಕ್ತಿ ಹೊಂದಿದೆ. |
| ಜೆ.ಎಸ್.ವಿ–39 | ಹಬ್ಬು ಶೇಂಗಾ ತಳಿಯಾಗಿದ್ದು ಕತ್ತು ಕೊಳೆ ರೋಗಕ್ಕೆ ನಿರೋಧಕ ಶಕ್ತಿ ಹೊಂದಿದೆ. |

**ಬೀಜದ ಪ್ರಮಾಣ ಹಾಗೂ ಬೀಜೋಪಚಾರ** : ಪ್ರತಿ ಎಕರೆಗೆ 50 ರಿಂದ 60 ಕಿಲೋ ಬೀಜ ಬಿತ್ತನೆ ಮಾಡಬೇಕು. ಪ್ರತಿ ಕಿಲೋ ಬಿತ್ತನೆ ಬೀಜಕ್ಕೆ 10 ಗ್ರಾಂ ಟ್ರೈಕೋಡರ್ಮಾ ಅಥವಾ 3 ಗ್ರಾಂ ಕಾರ್ಬಾಕ್ಸಿನ್ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡುವದರಿಂದ ಇಳುವರಿ ಪ್ರಮಾಣ ಹೆಚ್ಚಿಸಲು ಸಾಧ್ಯವಾಗುವುದು. ಇದರಿಂದಾಗಿ ಕತ್ತು ಹಾಗೂ ಬುಡ ಕೊಳೆಯುವ ರೋಗ ನಿಯಂತ್ರಿಸಬಹುದು.

**ಜೈವಿಕ ಗೊಬ್ಬರಗಳ ಮಿಶ್ರಣ** : ಬೀಜೋಪಚಾರದ ನಂತರ ಪ್ರತಿ ಎಕರೆಗೆ ಬಳಸುವ ಬೀಜಕ್ಕೆ 1 ಕಿಲೋ ರೈಜೋಬಿಯಂ ಹಾಗೂ 1 ಕಿಲೋ ರಂಜಕ ಕರಗಿಸುವ ಅಣುಜೀವಿ ಗೊಬ್ಬರಗಳನ್ನು ಬೀಜದೊಂದಿಗೆ ಚೆನ್ನಾಗಿ ಮಿಶ್ರಣ ಮಾಡಿ ಬಿತ್ತನೆ ಮಾಡಬೇಕು. ಇದರಿಂದ ಶೇಕಡಾ 15 ರಿಂದ 20 ರಷ್ಟು ರಾಸಾಯನಿಕ ಗೊಬ್ಬರಗಳ ಪ್ರಮಾಣ ಕಡಿಮೆ ಮಾಡಬಹುದು.

**ಗೊಬ್ಬರಗಳು** : ಪ್ರತಿ ಎಕರೆಗೆ 3 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಸೇರಿಸಿ ಬಿತ್ತನೆ ಮಾಡಬೇಕು. ನಂತರ ಶೇಂಗಾ ಬಿತ್ತುವ ಸಮಯದಲ್ಲಿ ಮಳೆಯಾಶ್ರಿತ ಬೆಳೆಗೆ ಪ್ರತಿ ಎಕರೆಗೆ 50 ಕಿಲೋ ಡಿ.ಎ.ಪಿ ಹಾಗೂ 20 ಕಿಲೋ ಮ್ಯುರೇಟ್ ಆಫ್ ಪೊಟ್ಯಾಶ ಗೊಬ್ಬರ ಕೊಡಬೇಕು. ಇದರ ಜೊತೆಗೆ 10 ಕಿಲೋ ಸತುವಿನ ಸಲ್ಫೇಟ್ ಹಾಗೂ 10 ಕಿಲೋ ಕಬ್ಬಿಣದ ಸಲ್ಫೇಟ್ ಗೊಬ್ಬರವನ್ನು 50 ಕಿಲೋ ಕೊಟ್ಟಿಗೆ ಗೊಬ್ಬರದ ಜೊತೆಗೆ ಬೆರೆಸಿ ಕೊಡಬೇಕು. ಶೇಂಗಾ ಬಿತ್ತಿದ 35 ರಿಂದ 40 ದಿನಗಳ ನಂತರ ಪ್ರತಿ ಎಕರೆಗೆ 200 ಕಿಲೋ ಜಿಪ್ಸಂ ಗೊಬ್ಬರವನ್ನು ಶೇಂಗಾ ಬೆಳೆಯ ಸಾಲಿನ ಎರಡೂ ಬದಿಗೆ ಎಡೆಕುಂಟೆಯಿಂದ ಕೊಟ್ಟು, ಸಾಲಿಗೆ ಮಣ್ಣು ಏರಿಸಬೇಕು. ಜಿಪ್ಸಂ ಗೊಬ್ಬರ ಕೊಡುವುದರಿಂದ ಕಾಳು ಚೆನ್ನಾಗಿ ಬಲಿತು ಎಣ್ಣೆ ಅಂಶ ಹೆಚ್ಚುತ್ತದೆ.

**ಕಳೆನಾಶಕದಿಂದ ಕಳೆ ನಿಯಂತ್ರಣ** : ಶೇಂಗಾ ಬಿತ್ತಿದ ದಿನ ಅಥವಾ ಮರುದಿನ 5 ಮಿ.ಲೀ. ಪೆಂಡಿಮೆಥಾಲಿನ್ 30 ಇ.ಸಿ (ಸ್ಟಾಂಪ್) ಕಳೆನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು ಹಾಗೂ ಶೇಂಗಾ ಬಿತ್ತಿದ 25 ರಿಂದ 30 ದಿವಸಗಳಲ್ಲಿ ಕಂಡುಬರುವ ಕಳೆಗಳ ಹತೋಟಿಗಾಗಿ ಪ್ರತಿ ಲೀಟರ್ ನೀರಿನಲ್ಲಿ 1.5 ಮಿ.ಲೀ. ಕ್ವಿಝೂಲಫಾಫ ಇಥೈಲ್ 5 ಇ.ಸಿ (ಟರ್ಗಾ ಸೂಪರ್) ಕಳೆನಾಶಕ ಸಿಂಪರಣೆ ಮಾಡಬೇಕು. ಪ್ರತಿ ಎಕರೆಗೆ 300 ರಿಂದ 400 ಲೀಟರ್ ಸಿಂಪರಣ ದ್ರಾವಣ ಬಳಸಬೇಕು

**ಜೋಡು ಸಾಲು ಬಿತ್ತನೆ**: ಗೆಜ್ಜೆ ಶೇಂಗಾ ಬಿತ್ತುವಾಗ ಪ್ರತಿ ಎರಡು ಸಾಲು ಬಿತ್ತನೆ ನಂತರ ಒಂದು ಸಾಲು ಖುಸಿ ಬಿಡಬೇಕು (ಮೂರು ತಾಳಿನ ಕೂರಿಗೆಯಿಂದ ಬಿತ್ತುವಾಗ ನಡುವಿನ ತಾಳು ಬಂದು ಮಾಡಬೇಕು). ಖುಸಿ ಬಿಟ್ಟ ಸಾಲುಗಳಲ್ಲಿ ಎಡೆಕುಂಟೆಯಿಂದ ಬೋದು ಬೀಳುವಂತೆ ಹೊಡೆಯಬೇಕು. ಈ ರೀತಿ ಜೋಡುಸಾಲು ಪದ್ಧತಿಯಿಂದ ಬೆಳೆಯ ವಿವಿಧ ಹಂತಗಳಲ್ಲಿ ಬೀಳುವ ಮಳೆ ನೀರನ್ನು ಪೂರ್ಣವಾಗಿ ಅಲ್ಲಿಯೇ ಇಂಗುವಂತೆ ಮಾಡಬಹುದು. ಈ ಪದ್ಧತಿಯಿಂದ ಕಡಿಮೆ ಮಳೆ ಬೀಳುವ ಸಂದರ್ಭಗಳಲ್ಲಿ ಹೆಚ್ಚಿನ ಇಳುವರಿ ಪಡೆಯಬಹುದು.

# ಬಿ.ಟಿ ಹತ್ತಿ ಬೆಳೆಯ ಬೇಸಾಯ ಕ್ರಮಗಳು

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬಿ.ಟಿ. ಹತ್ತಿ ಬೆಳೆಯನ್ನು ಬೆಳೆಯಲು ಒಲವು ತೋರುತ್ತಿರುವದರಕ್ಕೆ ಕಾರಣ ಅಧಿಕ ಇಳುವರಿ ಮತ್ತು ಹೆಚ್ಚು ಲಾಭದಾಯಕತೆ. ಆದರೆ ಈ ಬೆಳೆ ಬೆಳೆಯಲು ಹೈಬ್ರಿಡಗಳ ಆಯ್ಕೆ ಬಹಳ ಮುಖ್ಯವಾದುದು. ಕೃಷಿ ವಿಶ್ವ ವಿದ್ಯಾಲಯ ಧಾರವಾಡ ಇವರು ಶಿಫಾರಸ್ಸು ಮಾಡಿದ ಹೈಬ್ರಿಡಗಳಾದ ಫಸ್ಟ ಕ್ಲಾಸ್, ಅಜಿತ್, ಶಾಲಿಮಾರ ಹಾಗೂ ಚಾಂಪಿಯನ್ ಬಳಸುವುದು ಸೂಕ್ತ. ಹತ್ತಿ ಬೇಸಾಯದ ತಾಂತ್ರಿಕ ಮಾಹಿತಿಯನ್ನು ಈ ಕೆಳಗೆ ಕೊಡಲಾಗಿದೆ.

**ಬಿತ್ತನೆ ಕಾಲ** : ಮುಂಗಾರು ಹಂಗಾಮಿನಲ್ಲಿ ಮೇ-ಜೂನ್ ತಿಂಗಳಿನಲ್ಲಿ ಬಿತ್ತಬಹುದು. ಮುಂಚಿತವಾಗಿ ಬಿತ್ತುವುದರಿಂದ ಉತ್ತಮ ಬೆಳವಣಿಗೆ ಆಗುತ್ತದೆ. ತನ್ಮೂಲಕ ಮೊಗ್ಗು ಮತ್ತು ಕಾಯಿಗಳ ಉತ್ಪಾದನೆ ಹೆಚ್ಚಾಗಿ ಇಳುವರಿ ಪ್ರಮಾಣ ಹೆಚ್ಚಾಗುವುದು. ತಡವಾಗಿ ಬಿತ್ತಿದಲ್ಲಿ ಬೆಳೆಯ ಅವಧಿಯು ಕಡಿಮೆಯಾಗಿ ಇಳುವರಿ ಕಡಿಮೆಯಾಗುತ್ತದೆ.

**ಸಾಲಿನ ಅಂತರ** : ಕಡಿಮೆ ಆಳದ ಫಲವತ್ತಾಗಿರುವ ಭೂಮಿಯಲ್ಲಿ ಸಾಲಿನಿಂದ ಸಾಲಿಗೆ 3 ಫೂಟು ಮತ್ತು ಗಿಡದಿಂದ ಗಿಡಕ್ಕೆ 2 ಫೂಟು ಅಂತರ ಇಡಬೇಕು. ಹೆಚ್ಚು ಆಳ ಹಾಗೂ ಫಲವತ್ತಾಗಿರುವ ಭೂಮಿಯಲ್ಲಿ ಸಾಲಿನಿಂದ ಸಾಲಿಗೆ 3 ಫೂಟು ಮತ್ತು ಗಿಡದಿಂದ ಗಿಡಕ್ಕೆ 3 ಫೂಟು ಅಂತರ ಇರಬೇಕು.

**ಗೊಬ್ಬರಗಳು**: ಬಿತ್ತನೆಗೆ ಮೊದಲು ಪ್ರತಿ ಎಕರೆಗೆ ಸುಮಾರು 4-5 ಟ್ರ್ಯಾಕ್ಟರ್ ಸಗಣಿಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರವನ್ನು ಮಣ್ಣಿಗೆ ಸೇರಿಸಿ ನಂತರ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರ ಹಾಕಬೇಕು. ನೀರಾವರಿಯಲ್ಲಿ ಪ್ರತಿ ಎಕರೆಗೆ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರದ ಪ್ರಮಾಣವು 60 ಕಿಲೋ ಸಾರಜನಕ, 30 ಕಿಲೋ ರಂಜಕ ಹಾಗೂ 30 ಕಿಲೋ ಪೊಟ್ಯಾಷ್ ಇರುತ್ತದೆ. ಶೇಕಡಾ 50 ರಷ್ಟು ಸಾರಜನಕ, ಪೂರ್ತಿ ಪ್ರಮಾಣದ ರಂಜಕ ಮತ್ತು ಪೊಟ್ಯಾಷ್ ಬಿತ್ತುವಾಗ ಕೊಡಬೇಕು. ಅಂದರೆ ಪ್ರತಿ ಎಕರೆಗೆ 65 ಕಿಲೋ ಡಿ.ಎ.ಪಿ,40 ಕಿಲೋ ಯೂರಿಯಾ ಹಾಗೂ 50 ಕಿಲೋ ಪೊಟ್ಯಾಷ್ ಹಾಕಬೇಕು. ಉಳಿದ ಶೇಕಡಾ 50 ರ ಸಾರಜನಕವನ್ನು ಮೂರು ಸಮಭಾಗಗಳನ್ನಾಗಿ ಮೇಲು ಗೊಬ್ಬರವಾಗಿ ಹಾಕಬೇಕು. ಬಿತ್ತನೆಯಾದ 50, 80 ಹಾಗೂ 110 ದಿನಗಳ ನಂತರ ಪ್ರತಿ ಸಲ 22 ಕಿಲೋ ಯೂರಿಯಾವನ್ನು ಮೇಲು ಗೊಬ್ಬರವಾಗಿ ಪ್ರತಿ ಎಕರೆಗೆ ಹಾಕಬೇಕು. ಮಳೆಯಾಶ್ರಿತ ಪ್ರದೇಶದಲ್ಲಿ ಪ್ರತಿ ಎಕರೆಗೆ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರದ ಪ್ರಮಾಣ 43 ಕಿಲೋ ಡಿ.ಎ.ಪಿ., 70 ಕಿಲೋ ಯೂರಿಯಾ ಹಾಗೂ 33 ಕಿಲೋ ಪೊಟ್ಯಾಷ್ ಹಾಕಬೇಕು.

**ಸಸ್ಯ ಪ್ರಚೋದಕ/ಲಘು ಪೋಷಕಾಂಶಗಳ ಬಳಕೆ** : ಬೆಳೆಯು ಹೂ ಬಿಡಲು ಪ್ರಾರಂಭವಾದಾಗ ಮತ್ತು ಪೂರ್ತಿ ಹೂ ಅರಳಿದಾಗ 4.5 ಮಿ.ಲೀ. ಪ್ಲಾನೋಫಿಕ್ಸ್‌ನ್ನು 18 ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಪ್ರತಿ ಎಕರೆಗೆ 300 ರಿಂದ 400 ಲೀಟರ್ ದ್ರಾವಣ ಬಳಸಬೇಕು. ಇದರಿಂದ ಮೊಗ್ಗು, ಹೂವು ಹಾಗೂ ಕಾಯಿ ಉದುರುವದು ಕಡಿಮೆಯಾಗುತ್ತದೆ. ಬೆಳೆಯು ಸುಮಾರು 90 ರಿಂದ 110 ದಿನಗಳಿದ್ದಾಗ ಶೇಕಡಾ1 ರ ಮೆಗ್ನೀಶಿಯಂ ಸಲ್ಫೇಟ್ ಅಥವಾ ಶೇಕಡಾ 2 ಯೂರಿಯಾ ಅಥವಾ ಡಿ.ಎ.ಪಿ. ಸಿಂಪಡಿಸುವುದರಿಂದ ಎಲೆ ಕೆಂಪಾಗುವಿಕೆಯನ್ನು ತಡೆಗಟ್ಟಬಹುದು.

**ನೀರಾವರಿ** : ಮಣ್ಣು ಹಾಗೂ ಹವಾಗುಣಕ್ಕನುಗುಣವಾಗಿ ಮರಳು ಮಿಶ್ರಿತ ಮಣ್ಣಿನಲ್ಲಿ 10 ರಿಂದ 15 ದಿನಗಳಿಗೊಮ್ಮೆ ಮತ್ತು ಕಪ್ಪು ಮಣ್ಣಿನಲ್ಲಿ 20 ರಿಂದ 25 ದಿನಗಳಿಗೊಮ್ಮೆ ನೀರು ಹಾಯಿಸಬೇಕು. ಸಂದಿಗ್ಧ ಹಂತಗಳಾದ ಮೊಗ್ಗು ಬರುವ ಸಮಯ (40 ರಿಂದ 50 ದಿನಗಳು), ಹೂ ಅರಳುವ ಹಂತ (70 ರಿಂದ 90 ದಿನಗಳು) ಹಾಗೂ ಕಾಯಿ ಬೆಳವಣಿಗೆ ಹಂತಗಳಲ್ಲಿ (110 ರಿಂದ 120 ದಿನಗಳು) ಮಣ್ಣಿನ ತೇವಾಂಶ ಕಾಪಾಡಿಕೊಂಡಲ್ಲಿ ಅಧಿಕ ಇಳುವರಿ ಪಡೆಯಬಹುದು.

# ಮೆಣಸಿನಕಾಯಿ ಬೆಳೆಯ ಬೇಸಾಯ ಕ್ರಮಗಳು

ಮೆಣಸಿನಕಾಯಿ ಗದಗ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ. ಇದನ್ನು ನೀರಾವರಿ ಹಾಗೂ ಒಣ ಬೇಸಾಯದಲ್ಲಿ ಬೆಳೆಯಬಹುದು. ಈ ಬೆಳೆಗೆ ನೀರು ಬಸಿದು ಹೋಗುವಂತಹ ಫಲವತ್ತಾದ ಗೋಡು ಮಣ್ಣು ಉತ್ತಮ. ನೀರು ನಿಲ್ಲುವ ಜೌಗು ಭೂಮಿ ಇದರ ಬೇಸಾಯಕ್ಕೆ ಸೂಕ್ತವಲ್ಲ.

**ಬೇಸಾಯಕ್ಕೆ ಸೂಕ್ತವಾದ ತಳಗಳು**:

| **ತಳಗಳು** | **ವಿಶೇಷತೆಗಳು** |
|---|---|
| ಬ್ಯಾಡಗಿ ಡಬ್ಬಿ | ಅಧಿಕ ಇಳುವರಿ, ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ಬೆಲೆ ಹೆಚ್ಚು. ಮೆಣಸಿನಕಾಯಿ ಹಾಗೂ ಖಾರದ ಬಣ್ಣ ಆಕರ್ಷಣೀಯ |
| ಬ್ಯಾಡಗಿ ಕಡ್ಡಿ | ಅಧಿಕ ಇಳುವರಿ, ಉದ್ದವಾದ ಕಾಯಿ, ಮಾರುಕಟ್ಟೆ ಬೆಲೆ ಕಡಿಮೆ, ರಸ ಹೀರುವ ಕೀಟಗಳ ಬಾಧೆ ಕಡಿಮೆ |
| ದ್ಯಾವನೂರ ಡಿಲಕ್ಸ್ | ಅಧಿಕ ಇಳುವರಿ, ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ಬೆಲೆ ಹೆಚ್ಚು. ಮೆಣಸಿನಕಾಯಿ ಹಾಗೂ ಖಾರದ ಬಣ್ಣ ಆಕರ್ಷಣೀಯ |

**ಬಿತ್ತನೆಯ ಕಾಲ**: ಒಣಬೇಸಾಯದಲ್ಲಿ ಬೆಳೆಯಲು ಮೇ-ಜೂನ್ ತಿಂಗಳು ಹಾಗೂ ನೀರಾವರಿಯಲ್ಲಿ ಅಕ್ಟೋಬರ-ನವ್ವಂಬರ ಮತ್ತು ಜನೇವರಿ-ಫೆಬ್ರುವರಿ ತಿಂಗಳುಗಳು ಸೂಕ್ತ.

**ಬೀಜೋಪಚಾರ**: ಪ್ರತಿ ಎಕರೆ ಬಿತ್ತನೆ ಮಾಡಲು 1 ಕಿಲೋ ಬೀಜಕ್ಕೆ 8 ಗ್ರಾಂ ಥೈರಾಮ ಹಾಗೂ 8 ಗ್ರಾಂ ಇಮಿಡಾಕ್ಲೋಪ್ರಿಡ್ (ಗೌಚ್) ಔಷಧಿಯಿಂದ ಬೀಜೋಪಚಾರ ಮಾಡಬೇಕು.

**ಗೊಬ್ಬರಗಳು**: ಪ್ರತಿ ಎಕರೆಗೆ ಕೊಟ್ಟಿಗೆ ಗೊಬ್ಬರ 10 ಚಕ್ಕಡಿ ಹಾಗೂ **ರಾ**ಸಾಯನಿಕ ಗೊಬ್ಬರಗಳಾದ 60 ಕಿಲೋ ಯೂರಿಯಾ, 125 ಕಿಲೋ ಸಿಂಗಲ ಸೂಪರ ಫಾಸ್ಪೇಟ್ ಹಾಗೂ 40 ಕಿಲೋ ಪೊಟ್ಯಾಷ್ ಬೇಕಾಗುವುದು. ಈ ಗೊಬ್ಬರದ ಶೇಕಡಾ 50 ರಷ್ಟು ಪ್ರಮಾಣವನ್ನು ಬಿತ್ತುವ ಸಮಯದಲ್ಲಿ ಹಾಗೂ ಉಳಿದ ಶೇಕಡಾ 50 ರಷ್ಟು ಪ್ರಮಾಣವನ್ನು ಬಿತ್ತಿದ 40 ದಿನಗಳ ನಂತರ ಮೇಲು ಗೊಬ್ಬರವಾಗಿ ಹಾಕಬೇಕು.

**ಕಳೆ ನಿಯಂತ್ರಣ**: ಮೆಣಸಿನಕಾಯಿ ಬಿತ್ತಿದ ಮರುದಿನ ಕಳೆ ನಿಯಂತ್ರಣ ಮಾಡಲು ಪ್ರತಿ ಲೀಟರ್ ನೀರಿಗೆ 3 ಮಿ.ಲೀ ಪೆಂಡಾಮೆಥಿಲಿನ್ ಕಳೆನಾಶಕವನ್ನು ಸಿಂಪರಣೆ ಮಾಡಬೇಕು ಹಾಗೂ ಬಿತ್ತಿದ 25 ರಿಂದ 30 ದಿನಗಳ ನಂತರ ಕ್ವಿಜಾಲಪಾಫ್ ಇಥಾಯಿಲ್‌ನ್ನು ಪ್ರತಿ ಲೀಟರ್ ನೀರಿಗೆ 2 ಮಿ.ಲೀ ಬೆರೆಸಿ ಸಿಂಪರಣೆ ಮಾಡಬೇಕು.

**ಹೂವು ಉದುರುವುದರ ನಿಯಂತ್ರಣ**: ಸಾಮಾನ್ಯವಾಗಿ ಮೆಣಸಿನಕಾಯಿ ಬೆಳೆಯಲ್ಲಿ ಹೂವುಗಳು ಬಹಳಷ್ಟು ಉದುರಿ ಹೋಗುವುದುಂಟು. ವಾತಾವರಣದಲ್ಲಿ ಏರು-ಪೇರು ಆದಾಗ ಭೂಮಿಯಲ್ಲಿ ಹೆಚ್ಚು ಮತ್ತು ಕಡಿಮೆ ತೇವಾಂಶವಾದಾಗ ಹಾಗೂ ಕೊಟ್ಟಂತಹ ಪೋಷಕಾಂಶಗಳು ಕಡಿಮೆಯಾದಾಗ ಹೂವುಗಳು ಉದುರುತ್ತವೆ. ಇದರ ಹತೋಟಿಗಾಗಿ ಮೆಣಸಿನಕಾಯಿ ಬೆಳೆಯ 40, 60 ಹಾಗೂ 80 ದಿನಗಳ ಹಂತದಲ್ಲಿ 0.5 ಮಿ.ಲೀ ಪ್ಲಾನೋಫಿಕ್ಸ್ ಮತ್ತು 5 ಗ್ರಾಂ ಪೊಟ್ಯಾಶಿಯಂ ನೈಟ್ರೇಟ್ (13:0:45) ಹಾಗೂ 4 ಗ್ರಾಂ 19:19:19 + ಹಾಗೂ 70 ಗ್ರಾಂ ವೆಜಿಟೆಬಲ್ ಸ್ಪೆಶಿಯಲ್ ಗೊಬ್ಬರವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು.

**ಮೆಣಸಿನಕಾಯಿ ಬೆಳೆಗಳಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ ಕ್ರಮಗಳು**

**1) ಥ್ರಿಪ್ಸನುಸಿ**: ಈ ಕೀಟವು ಎಲೆ, ಮೊಗ್ಗು, ಹೂವು ಮತ್ತು ಗಿಡಗಳ ಇತರ ಭಾಗಗಳಿಂದ ರಸ ಹೀರುವದರಿಂದ ಗಿಡಗಳ ಬೆಳವಣಿಗೆ ಕುಂಠಿತವಾಗುವದಲ್ಲದೇ ಹೊಸ ಚಿಗುರು, ಎಲೆಗಳು ಹಾಗೂ ಮೊಗ್ಗುಗಳು ಸಣ್ಣದಾಗುವವು. ಎಲೆಗಳು ಆಕಾಶದ ಕಡೆಗೆ ಮುದುಡುವವು. ಇದಕ್ಕೆ ಹೊರ ಮುಟುರಿ ರೋಗ ಎಂದು ಕರೆಯುತ್ತಾರೆ. ಗಿಡಗಳಲ್ಲಿ ಹೂವು ಮತ್ತು ಕಾಯಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುವದರಿಂದ ಇಳುವರಿ ಬಹಳಷ್ಟು ನಷ್ಟವಾಗುತ್ತದೆ.

**ಹತೋಟಿ ಕ್ರಮಗಳು** : ಈ ಕೀಟದ ಬಾಧೆ ಕಂಡ ತಕ್ಷಣ 2 ಮಿ.ಲೀ ಡೈಮಿಥೋಯೇಟ್ ಅಥವಾ 0.3 ಗ್ರಾಂ ಥೈಯೋಮಿಥಾಕ್ಸಾಮ್ ಅಥವಾ 5 ಗ್ರಾಂ ವರ್ಟಿಸಿಲಿಯಂ ಲೆಕೇನಿ ಹಾಗೂ ನೀರಿನಲ್ಲಿ ಕರಗುವ 19:19:19

(NPK) ಗೊಬ್ಬರವನ್ನು ಪ್ರತಿ ಲೀಟರ್ ನೀರಿನಲ್ಲಿ 4 ಗ್ರಾಂ ಅಥವಾ ಯೂರಿಯಾ 2 ಗ್ರಾಂ ಕೂಡಿಸಿ ಸಿಂಪರಣೆ ಮಾಡಿರಿ.

**2) ಜೇಡುನುಸಿ**: ಈ ಕೀಟವು ಗಿಡದಲ್ಲಿದ್ದರೂ ಕಣ್ಣಿಗೆ ಕಾಣಿಸುವದಿಲ್ಲ. ಅತೀ ಸಣ್ಣ ಗಾತ್ರದ ಕೀಟವು ಗಿಡಗಳ ಎಲೆ ಮತ್ತು ಹೊಸ ಚಿಗುರುಗಳಿಂದ ರಸವನ್ನು ಹೀರಿ ಗಿಡಗಳ ಎಲೆಗಳು ಕೆಳಗೆ ಬಾಗುವಂತೆ ಮಾಡುವದು (ಒಳ ಮುಟುರು ರೋಗ). ಇದರಿಂದ ಗಿಡಗಳಲ್ಲಿ ಹೂವು ಹಾಗೂ ಮೊಗ್ಗು ಕಾಣಿಸದೇ ನಂಜು ರೋಗಕ್ಕೆ ತುತ್ತಾದಂತೆ ಗಿಡವು ಕಾಣಿಸುವದು. ಈ ರೋಗದಿಂದ ಗಿಡಗಳಲ್ಲಿ ಹೂವು, ಕಾಯಿ ಮತ್ತು ಹಣ್ಣುಗಳ ಸಂಖ್ಯೆ ಕಡಿಮೆಯಾಗಿ ಇಳುವರಿ ಬಹಳಷ್ಟು ನಷ್ಟವಾಗುವದು.

**ಹತೋಟಿ ಕ್ರಮಗಳು** : ಈ ಕೀಟದಿಂದ ಉಂಟಾದ ನಂಜು ರೋಗದ ಲಕ್ಷಣಗಳು ಕಂಡ ತಕ್ಷಣ ಡೈಕೋಪಾಲ್ 2.5 ಮಿ.ಲೀ ಅಥವಾ ಥೈಫೆಂತುರಿಯಾನ್ 1.5 ಗ್ರಾಂ ಮತ್ತು ನೀರಿನಲ್ಲಿ ಕರಗುವ 19:19:19 (NPK) ಗೊಬ್ಬರವನ್ನು 4 ಗ್ರಾಂ ಅಥವಾ ಯೂರಿಯ 20 ಗ್ರಾಂ ನಂತೆ ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.

**3) ಕಾಯಿ ಕೊರಕ**: ಈ ಕೀಟಗಳು ಮೊಗ್ಗು ಹಾಗೂ ಕಾಯಿಗಳಲ್ಲಿ ರಂಧ್ರ ಮಾಡಿ ತಿನ್ನುತ್ತವೆ. ಇದರಿಂದ ರಂಧ್ರದಲ್ಲಿ ಮಳೆ ನೀರು ಹೊಕ್ಕು ಮೊಗ್ಗು ಮತ್ತು ಕಾಯಿಗಳು ಉದುರುವದರಿಂದ ಇಳುವರಿ ನಷ್ಟವಾಗುತ್ತದೆ.

**ಹತೋಟಿ ಕ್ರಮಗಳು** : ಕಾಯಿ ಕೊರಕದ ಹತೋಟಿಗೆ ಶೇಕಡಾ 5 ರ ಬೇವಿನ ಬೀಜದ ಕಷಾಯವನ್ನು ಬಿತ್ತಿದ 7-8 ವಾರಗಳ ನಂತರ ಸಿಂಪರಣೆ ಮಾಡಿ ಹತೋಟಿ ಮಾಡಬೇಕು. ಅಲ್ಲದೇ ಎನ್.ಪಿ.ವ್ಹಿ 250 ಎಲ್.ಇ ಅಥವಾ ಪ್ರೊಫೇನೊಫಾಸ್ 2 ಗ್ರಾಂ ಅಥವಾ ಫ್ಲೂಬೆಂಡಿಮೈಡ್ 0.1 ಮಿ.ಲೀ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಬೆರೆಸಿ ಬಿತ್ತಿದ ಹನ್ನೊಂದು ವಾರಗಳ ನಂತರ ಸಿಂಪರಣೆ ಮಾಡಬಹುದು.

## ಈರುಳ್ಳಿ ಬೇಸಾಯ ಕ್ರಮಗಳು

ಈರುಳ್ಳಿ ಗದಗ ಜಿಲ್ಲೆಯ ಒಂದು ಪ್ರಮುಖ ವಾಣಿಜ್ಯ ಬೆಳೆ, ಇದನ್ನು ನೀರಾವರಿ ಹಾಗೂ ಒಣ ಬೇಸಾಯದಲ್ಲಿ ಕೂಡ ಬೆಳೆಯಲಾಗುತ್ತದೆ. ಈರುಳ್ಳಿ ಬೇಸಾಯದಲ್ಲಿ, ಹೆಚ್ಚು ಇಳುವರಿ ಮತ್ತು ಗುಣಮಟ್ಟದ ಗಡ್ಡೆಗಳನ್ನು ಉತ್ಪಾದಿಸಲು ಈ ಕೆಳಗಿನ ಕ್ರಮಗಳನ್ನು ಅನುಸರಿಸಬೇಕು.

ಅಧಿಕ ಇಳುವರಿ ಕೊಡುವ ಮತ್ತು ಹೆಚ್ಚು ಬಾಳಿಕೆ ಬರುವ ಗಡ್ಡೆ ಉತ್ಪಾದಿಸುವ ಮತ್ತು ಎಲೆ ಮಚ್ಚೆರೋಗ ತಡೆದುಕೊಳ್ಳುವ ತಳಿಯಾದ ಅರ್ಕಾ ಕಲ್ಯಾಣ ತಳಿಯನ್ನು ಬೇಸಾಯಕ್ಕೆ ಉಪಯೋಗಿಸಬೇಕು. ಪ್ರತಿ ಎಕರೆಗೆ 2 ಕ್ವಿಂಟಲ್ ಜಿಪ್ಸಂನ್ನು ಬಿತ್ತುವ ಪೂರ್ವದಲ್ಲಿ ಭೂಮಿಗೆ ಸೇರಿಸಬೇಕು. ಇದರಿಂದ, ಗಡ್ಡೆಗಳು ಬೇಗನೆ ಕೊಳೆಯುವದಿಲ್ಲ. ಪ್ರತಿ ಎಕರೆಗೆ 50 ಕಿಲೋ ಪೊಟ್ಯಾಷ ಹಾಗೂ 40 ಕಿಲೋ ಯೂರಿಯಾವನ್ನು ಬಿತ್ತುವ ಮುಂಚೆ ಭೂಮಿಗೆ ಹಾಕಬೇಕು. ಬಿತ್ತಿದ 30 ದಿವಸದ ನಂತರ ಭೂಮಿಯಲ್ಲಿ ಚೆನ್ನಾಗಿ ತೇವಾಂಶವಿದ್ದರೆ 40 ಕಿಲೋ ಯುರಿಯಾವನ್ನು ಮೇಲು ಗೊಬ್ಬರವಾಗಿ ಕೊಡಬೇಕು. ಕಳೆಗಳನ್ನು ಸುಲಭವಾಗಿ ನಿಯಂತ್ರಣ ಮಾಡಲು ಮತ್ತು ಒಂದೇ ಸಮನಾದ ಗಡ್ಡೆಯನ್ನು ಪಡೆಯಲು ಒಂದೇ ಮೈ ಬಿತ್ತನೆ ಮಾಡಬೇಕು. ಈರುಳ್ಳಿಯಲ್ಲಿ ರಾಸಾಯನಿಕವಾಗಿ ಕಳೆ ನಿಯಂತ್ರಣ ಮಾಡಲು ಬಿತ್ತಿದ ದಿನ ಅಥವಾ ಮರು ದಿನ ಭೂಮಿಯಲ್ಲಿ ಚೆನ್ನಾಗಿ ತೇವಾಂಶವಿದ್ದರೆ, ಪ್ರತಿ ಲೀಟರ ನೀರಗೆ 3 ಮಿಲಿ ಲೀಟರ ಪೆಂಡಾಮಿಥಾಲಿನ ಔಷಧಿಯನ್ನು ಬೆರೆಸಿ ಸಿಂಪರಣೆ ಮಾಡಬೇಕು. ಬಿತ್ತಿದ 25-30 ದಿವಸಗಳ ನಂತರ ಪ್ರತಿ ಲೀಟರ ನೀರಿಗೆ 2 ಮಿಲಿ ಲೀಟರ ಟರ್ಗಾಸೂಪರನ್ನು ಸಿಂಪರಣೆ ಮಾಡಬೇಕು. ಈರುಳ್ಳಿಯಲ್ಲಿ ರಸಹೀರುವ ಕೀಟದ ಬಾಧೆ ನಿಯಂತ್ರಣ ಮಾಡಲು ಹೊಲದ ನಾಲ್ಕೂ ಬದಿಗೆ 2 ಸಾಲು ಹೈಬ್ರಿಡ ಗೋವಿನ ಜೋಳ ಬಿತ್ತನೆ ಮಾಡಬೇಕು.


**ಬೀಜಗಳ ಲಭ್ಯತೆ**

**ಹೆಸರು ತಳಿಯಾದ ಡಿ.ಜಿ.ಜಿ.ವಿ-2, ಈರುಳ್ಳಿ ತಳಗಳಾದ ಅರ್ಕಾ ಕಲ್ಯಾಣ ಹಾಗೂ ಭೀಮಾ ಸೂಪರ್, ತೊಗರಿ ತಳಿಯಾದ ಟಿ.ಎಸ್.-3 ಆರ್, ನವಣೆ ತಳಿಯಾದ ಡಿ.ಎಚ್.ಎಫ್.ಟಿ-109-3, ಹವೀಜ ತಳಿಯಾದ ಅಜ್ಜಂಪುರಂ ಬೀಜಗಳು ನಮ್ಮ ಕೇಂದ್ರದಲ್ಲಿ ಲಭ್ಯವಿರುತ್ತವೆ.**

ಬೀಜ ಖರಿದೀಸಲು ಸಂಪರ್ಕಿಸಿರಿ :

ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ್, ಮೊಬೈಲ್: 9480622772, ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ


## ಒಣ ಬೇಸಾಯದಲ್ಲಿ ತೋಟಗಾರಿಕೆ ಮಹತ್ವ

ತೋಟಗಾರಿಕೆಯ ಬೇಸಾಯ ಅಂದರೆ, ಬಾವಿ ಇರಬೇಕು ಅಥವಾ ಕೊಳವೆ ಬಾವಿ ಇರಬೇಕು ಅಥವಾ ನದಿಯಿಂದ ನೀರಿನ ಸೌಕರ್ಯ ಇದ್ದಾಗ ಮಾತ್ರ ತೋಟಗಾರಿಕೆ ಮಾಡಬಹುದೆಂದು ನಂಬಿಕೆ ಎಲ್ಲರಲ್ಲೂ ಇದೆ.

ಆದರೆ ಇವತ್ತು ತೋಟಗಾರಿಕೆ ಬೆಳೆಗಳನ್ನು ಒಣಬೇಸಾಯದಲ್ಲಿ ಕೂಡ ಅಳವಡಿಸಿ ಸಾಕಷ್ಟು ಲಾಭವನ್ನು ಪಡೆಯುತ್ತಿರುವ ರೈತರ ನಿದರ್ಶನಗಳವೆ. ಗದಗ ಜಿಲ್ಲೆಯ ನೂರು ವರ್ಷದ ಇತಿಹಾಸ ನೋಡಿದಾಗ ಶೇ.೩೦ ರಷ್ಟು ವರ್ಷಗಳಲ್ಲಿ ಬರದಿಂದ ತೊಂದರೆ ಆಗಿರುವುದು ಕಂಡು ಬಂದಿದೆ.

ಕಳೆದ ನಾಲ್ಕು ವರ್ಷದಿಂದ ಮಳೆಯ ಸರಾಸರಿ ನೋಡಿದಾಗ ರೈತರು ಹಾಕಿದ ಬೆಳೆ ಕೂಡ ಬರಲಾರದ ಪರಿಸ್ಥಿತಿ ಒದಗಿದೆ. ಆದ್ದರಿಂದ ರೈತರು ಕೇವಲ ಕ್ಷೇತ್ರ ಬೆಳೆಗಳ ಮೇಲೆ ಅವಲಂಬಿತರಾಗದೇ ಸ್ವಲ್ಪ ಮಟ್ಟಿಗೆ ತೋಟಗಾರಿಕೆ ಬೆಳೆಗಳಾದ ಮುಖ್ಯವಾಗಿ ಹಣ್ಣಿನ ಬೆಳೆಗಳಾದ ಮಾವು, ಗೋಡಂಬಿ, ನೇರಳೆ, ಹುಣಸೆ, ಬೆಟ್ಟದ ನೆಲ್ಲಿ ಇವುಗಳನ್ನು ಬೇಸಾಯ ಮಾಡಿದರೆ ಬರದಲ್ಲಿಯೂ ಕೂಡ ಆದಾಯವನ್ನು ಪಡೆಯಬಹುದು ಜೊತೆಗೆ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಸರಕಾರದಿಂದ ಅನೇಕ ಸೌಲಭ್ಯಗಳಿರುವುವು.

ಹಣ್ಣಿನ ಬೆಳೆಗಳನ್ನು ಒಣ ಬೇಸಾಯದಲ್ಲಿ ಬೆಳೆಯಲು ಮಣ್ಣಿನ ಗುಣಧರ್ಮಕ್ಕನುಗುಣವಾಗಿ ಬೆಳೆಗಳನ್ನು ವಿಂಗಡಣೆ ಮಾಡಬಹುದು. ಕೆಂಪು (ಮಸಾರಿ) ಮಣ್ಣಿನಲ್ಲಿ ಮಾವು, ಗೋಡಂಬಿ, ನೇರಳೆ ಇವುಗಳನ್ನು ಮತ್ತು ಕಪ್ಪು (ಎರೆ) ಮಣ್ಣಿನಲ್ಲಿ ಹುಣಸೆ, ನೆಲ್ಲಿ, ಸೀತಾಫಲ ಬೆಳೆಗಳನ್ನು ಬೇಸಾಯ ಮಾಡಬಹುದು. ಎಲ್ಲ ಹಣ್ಣಿನ ಬೇಸಾಯ ಪ್ರಾರಂಭ ಮಾಡಲು ಎಪ್ರಿಲ್-ಮೇ ತಿಂಗಳು ಸೂಕ್ತ. ಈ ತಿಂಗಳಲ್ಲಿ ೩ x ೩ x ೩ ಘೂಟಿನ ಕುಣಿಗಳನ್ನು ತೆಗೆದು, ಬಿಸಿಲಿಗೆ ಬಿಡಬೇಕು. ಸಸಿಗಳನ್ನು ನಾಟಿ ಮಾಡಲು ಜೂನ್-ಜುಲೈ ತಿಂಗಳು ಸೂಕ್ತವಾದ ಕಾಲ. ಸಸಿಗಳನ್ನು ನಾಟಿ ಮಾಡಿ, ಕನಿಷ್ಟ ಎರಡು ವರ್ಷ ನೀರುಣಿಸಿ ಚೆನ್ನಾಗಿ ಬೆಳೆಸಿದರೆ ಸಸಿಗಳು ಸಾಯುವದಿಲ್ಲ. ಸಸಿಗಳನ್ನು ನಾಟಿ ಮಾಡಿದ ಮೇಲೆ ಎರಡು ವರ್ಷ ಸಸಿಗಳನ್ನು ರಕ್ಷಣೆ ಮಾಡಿದರೆ ಕಡಿಮೆಯೆಂದರೆ 40 ವರ್ಷವಾದರೂ ಫಲಕೊಡುತ್ತವೆ.

ತೋಟಗಾರಿಕೆ ಬೆಳೆಗಳನ್ನು ಕ್ಷೇತ್ರದಲ್ಲಿ ಅಳವಡಿಸಲು ಸರಕಾರದಿಂದ ಅನೇಕ ಯೋಜನೆಗಳವೆ. ಮುಖ್ಯವಾಗಿ ರಾಷ್ಟ್ರೀಯ ತೋಟಗಾರಿಕಾ ಮಿಷನ್, ಗೇರು ಅಭಿವೃದ್ಧಿ ಮಂಡಳಿ, ಕೋಚಿನ್, ಜಿಲ್ಲಾ ತೋಟಗಾರಿಕೆ ಇಲಾಖೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಇತ್ಯಾದಿಗಳ ಪ್ರಯೋಜನೆ ಪಡೆದು ರೈತ ಬಾಂಧವರು ತಮ್ಮ ಜಮೀನಿನ ಕೆಲವು ಭಾಗದಲ್ಲಿ ಹಣ್ಣಿನ ಬೆಳೆಗಳನ್ನು ಬೆಳೆದರೆ ಬರದಲ್ಲಿಯೂ ಆದಾಯ ಪಡೆಯಲು ಸಾಧ್ಯವಾಗುವುದು.

## ಬೇಸಿಗೆಯಲ್ಲಿ ಜಾನುವಾರುಗಳ ನಿರ್ವಹಣೆ

1. ಜಾನುವಾರುಗಳನ್ನು ಬಿಸಿಲಿಗೆ ಬಿಡಬಾರದು ಮತ್ತು ನೆರಳಲ್ಲಿ ಕಟ್ಟಬೇಕು.
2. ಬೀಸು ಗಾಳಿಯ (ಫ್ಯಾನ್) ಸೌಲಭ್ಯ ಒದಗಿಸಿದರೆ ಉತ್ತಮ.
3. ಮೇಲ್ಛಾವಣಿಯ ಮೇಲೆ ಸೋಗೆ ಹೊದಿಸಿದರೆ ಉತ್ತಮ.
4. ಕುಡಿಯಲು ತಂಪು ನೀರನ್ನು ಸದಾಕಾಲ ಒದಗಿಸಬೇಕು.
5. ಸಾಧ್ಯವಿದ್ದಷ್ಟು ತಂಪಾದ ಸಮಯದಲ್ಲಿ ಜಾನುವಾರುಗಳನ್ನು ಮೇಯುವಂತೆ ರೂಢಿ ಮಾಡಬೇಕು.
6. ಜಾನುವಾರುಗಳಿಗೆ ಹಸಿರು ಮೇವು ಒದಗಿಸುವುದರಿಂದ ಉಷ್ಣದ ಒತ್ತಡ ಕಡಿಮೆಯಾಗುತ್ತದೆ.
7. ಎಮ್ಮೆಗಳಿಗೆ ನೀರಿನ ಹೊಂಡ ಮಾಡಿ ಮಧ್ಯಾಹ್ನ ನೀರಿನಲ್ಲಿರಲು ಅವಕಾಶ ಮಾಡಬೇಕು.
8. ಬೇಸಿಗೆ ಹಂಗಾಮಿನಲ್ಲಿ ದಿನ ನಿತ್ಯ ದಾನಿ ಮಿಶ್ರಣವನ್ನು ಬೆಳಗ್ಗೆ, ಸಂಜೆ ಮತ್ತು ರಾತ್ರಿಯಲ್ಲಿ ತಿನ್ನಿಸುವುದು ಉತ್ತಮ.

**ಮೊಬೈಲ್ ಮೂಲಕ ಕೃಷಿ ಸಂದೇಶಗಳನ್ನು ಪಡೆಯಲು ನೋಂದಣಿಗಾಗಿ ದೂರವಾಣಿ ಸಂಖ್ಯೆ: 08372-289606 ಕರೆ ಮಾಡಿರಿ**


**ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕರು:
ಡಾ॥ ಎಲ್.ಜಿ.ಹಿರೇಗೌಡರ
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಸಂಪಾದಕರು:
ಡಾ॥ ಸುಧಾ ವಿ. ಮಂಕಣಿ
ವಿಷಯ ತಜ್ಞರು (ಗೃಹ ವಿಜ್ಞಾನ)

ಸಹ ಸಂಪಾದಕರು:
ಶ್ರೀ ವ್ಹಿ.ಡಿ.ವೈಕುಂಠೆ, ವಿಷಯ ತಜ್ಞರು (ಬೇಸಾಯ ಶಾಸ್ತ್ರ)
ಶ್ರೀ ಎಸ್.ಎಚ್. ಆದಾಪೂರ, ವಿಷಯ ತಜ್ಞರು (ಕೃಷಿ ವಿಸ್ತರಣೆ)
ಕುಮಾರಿ ಹೇಮಾವತಿ ಹಿರೇಗೌಡರ, ಪ್ರಭಾರಿ ವಿಷಯ ತಜ್ಞರು (ತೋಟಗಾರಿಕೆ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಶ್ರೀ ಎಸ್.ಕೆ.ಮುದ್ಲಾಪೂರ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ)
ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)
ಡಾ॥ ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

ವಿನ್ಯಾಸ ಹಾಗೂ ಅಕ್ಷರ ಜೋಡಣೆ:
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

ಸಹಾಯ:
ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು



ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ-582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: (08372)289606, ಇ-ಅಂಚೆ:kvkhulkoti@gmail.com, kvk.Gadag@icar.gov.in ಅಂತರ್‌ಜಾಲ: www.khpkvk.org